# 'ನಿಮ್ಮ ಹಣ್ಣನ್ನು ನೀವೇ ಕಿತ್ತುಕೊಳ್ಳಿ'

■ ಚಿತ್ರ ಬರಹ:
**ಬಿ.ಜಿ. ರಘುಪತಿ**





ನನ್ನ ಮಗ ಮತ್ತು ನಾಲ್ಕೈದು ಮಂದಿ ಸಂಬಂಧಿಕರೂ ಅಮೆರಿಕದಲ್ಲಿದ್ದಾರೆ. ಆದರೆ ಅವರ್‍ಯಾರಿಗೂ ಅಲ್ಲಿನ ಹಳ್ಳಿಗಳ ಬಗ್ಗೆ ಏನೂ ಗೊತ್ತಿಲ್ಲ. ಇತ್ತೀಚೆಗೆ ನಾನು ಅಮೆರಿಕಕ್ಕೆ ಹೋದಾಗ ಹಳ್ಳಿಗಳನ್ನು ನೋಡುವ ಅವಕಾಶ ಸಿಕ್ಕಿತು.

ಅಮೆರಿಕಾದಲ್ಲಿ 'ಪಿಕ್ ಯುವರ್ ಓನ್ ಫ್ರುಟ್ಸ್' ಎಂಬ ಪರಿಕಲ್ಪನೆ ಇದೆ. ಅಮೆರಿಕನ್ನರಿಗೆ ವಾರಾಂತ್ಯದಲ್ಲಿ ಏನಾದರೂ ಹೊಸದು ಬೇಕು. ಹೆಚ್ಚಿನವರಿಗೆ ಹಳ್ಳಿಯ ಮತ್ತು ವ್ಯವಸಾಯದ ಬಗ್ಗೆ ಅರಿವಿರುವುದಿಲ್ಲ. ಅಲ್ಲಿಗೆ ಹೋಗಿ ನೋಡುವ ಅವಕಾಶಗಳೂ ಕಡಿಮೆ. ಅದಕ್ಕೆಂದೇ ಬೆಳೆಗಾರರು ಒಂದು ಉಪಾಯ ಮಾಡಿದ್ದಾರೆ. ಅದೇನೆಂದರೆ, ತಮ್ಮ ಬೆಳೆ ಕೊಯ್ಲಿಗೆ ಬಂದಾಗ ಹತ್ತಿರದ ಪೇಟೆಯ ಜನರನ್ನು 'ನಿಮ್ಮ ಕೊಯ್ಲನ್ನು ನೀವೇ ಕೊಯ್ದುಕೊಂಡು ಹೋಗಿ' ಎಂದು ಆಹ್ವಾನಿಸುವುದು! ಈ ಆಹ್ವಾನವನ್ನು ಇ-ಮೇಲ್ ಮೂಲಕ ಮತ್ತು ವೆಬ್‌ಸೈಟ್ ಮೂಲಕ ಕಳುಹಿಸುತ್ತಾರೆ. ಸ್ವಚ್ಛತೆ ಮತ್ತು ಸುರಕ್ಷೆಯ ದೃಷ್ಟಿಯಿಂದ ನಾಯಿಗಳನ್ನು ಕರೆದುಕೊಂಡು ಹೋಗಲು ಬಿಡುವುದಿಲ್ಲ.

ಪೇಟೆಯ ಜನರಿಗೆ ಹಳ್ಳಿಗೆ ಹೋಗುವ ಅವಕಾಶ, ತಮಗೆ ಬೇಕಾದ ಮತ್ತು ಬೇಕಾದಷ್ಟು ಹಣ್ಣು – ತರಕಾರಿಯನ್ನು ತಾವೇ ಕೊಯ್ಯುವುದು ಖುಷಿ ಕೊಡುವ ಅನುಭವವೇ. ತಾಜಾ ವಸ್ತು ಸಿಗುವ ಸಂತೋಷ ಮಾತ್ರವಲ್ಲ, ಸ್ವಂತ ಕೈಯಿಂದ ಕೊಯ್ಲು ಮಾಡಿದ ಅನುಭವ! ಹಾಗೆಂದು ಬೆಲೆ ಮಾತ್ರ ಕಡಿಮೆ ಇಲ್ಲ. ಬೆಳೆಗಾರರ ವ್ಯವಹಾರ ಚತುರತೆ ಮೆಚ್ಚಲೇಬೇಕು– ವ್ಯಾಪಾರದ ಜತೆಗೆ ಕೊಯ್ಲಿನ ಖರ್ಚೂ ಉಳಿದಂತೆ. ಬಂದವರ ಕಾರನ್ನು ಪಾರ್ಕ್ ಮಾಡಲು ಜಾಗ, ವ್ಹೀಲ್‌ಚೇರ್‌ನವರಿಗೆ ಪ್ರತ್ಯೇಕ ಜಾಗ, ಅದಕ್ಕೆ ಸರಿಯಾಗಿ ಮಾರ್ಕಿಂಗು, ಕುಡಿಯಲು ನೀರು, ಹಣ್ಣನ್ನು ಹಾಕಲು ಸುಂದರವಾದ ಬುಟ್ಟಿ, ಹೋದ ಕೂಡಲೇ ನಗುನಗುತ್ತಾ ಸ್ವಾಗತಿಸುವ ಬೆಳೆಗಾರ್ತಿ! ನಡುವೆ, 'ಒಂದೊಂದು ಹಣ್ಣನ್ನು ಬೇಕಾದರೆ ತಿಂದು ರುಚಿ ನೋಡಿ ಕಿತ್ತುಕೊಳ್ಳಿ' ಎನ್ನುವ ಸೌಜನ್ಯದ ಮಾತು, ಯಾವ ತೋಟದ ಯಾವ ಸಾಲಿನಲ್ಲಿ ಚೆನ್ನಾಗಿರುವ ಹಣ್ಣುಗಳು ಇವೆ ಎಂಬ ವಿವರಣೆ. ಚೆನ್ನಾಗಿ ಮಾಗಿರುವ ಹಣ್ಣು ಯಾವ ಬಣ್ಣಕ್ಕೆ ತಿರುಗಿರುತ್ತದೆ ಎಂಬುದನ್ನು ತಿಳಿಸುವಿಕೆ, ಹಣ್ಣು/ ತರಕಾರಿಯನ್ನು ಹೇಗೆ ಕೀಳುವುದೆಂಬ ಬಗ್ಗೆ ವಿವರಣೆ– ಹೀಗೆ ಎಲ್ಲದರಲ್ಲೂ ಅಚ್ಚುಕಟ್ಟುತನ.

ಮುಖ್ಯವಾಗಿ ತುಂಬಾ ಚೆನ್ನಾಗಿ ಮುದ್ರಿಸಿರುವ ಒಂದು ಕರಪತ್ರವನ್ನೂ ಕೊಡುತ್ತಾರೆ. ಅದರಲ್ಲಿ ಅವರು ಬೆಳೆಯುವ ಹಣ್ಣು/ ತರಕಾರಿಗಳ, ಅವುಗಳಲ್ಲಿರುವ ವಿಟಮಿನ್ ಅಂಶಗಳ ವಿವರ ಇರುತ್ತದೆ. ಅವನ್ನು ಹೇಗೆ ಸಂಸ್ಕರಿಸುವುದು. ಹೇಗೆ ಕೆಡದಂತೆ ಇಡುವುದು ಮತ್ತು ಅತಿ ಮುಖ್ಯವಾಗಿ ಅವುಗಳಿಂದ ಏನೇನನ್ನು ಹೇಗೆ ಮಾಡಬಹುದು ಎಂಬ (ರೆಸಿಪಿ) ವಿವರವೂ ಇರುತ್ತದೆ. ಜತೆಗೆ ಅವರ ಇ-ಮೇಲ್ ವಿಳಾಸ, ವೆಬ್ ಸೈಟ್ ವಿವರ, ವರ್ಷದ ಯಾವ ಯಾವ ದಿನಗಳಲ್ಲಿ ಯಾವ್ಯಾವ ಹಣ್ಣು ಸಿಗುತ್ತವೆ ಎಂಬ ಮಾಹಿತಿ!

ವರ್ಜೀನಿಯಾ ರಾಜ್ಯದ ಬ್ಲಾಕ್ಸ್‌ಬರ್ಗ್‌ನಲ್ಲಿರುವ ನನ್ನ ಮಗನ ಮನೆಯಿಂದ ಸುಮಾರು ಏಳು ಮೈಲು (11 ಕಿ.ಮಿ.) ದೂರದಲ್ಲಿರುವ '3–ಬರ್ಡ್' ಎಂಬ ಫಾರಂಗೆ ನಾವು ಜುಲೈನಲ್ಲಿ ಹೋದಾಗ ಕಂಡದ್ದು ಇದು. ಕೃಷಿಕ ಕುಟುಂಬ ಮೂಲದ ನಮಗೆ ಅಮೆರಿಕದಲ್ಲಿ ಇದನ್ನೆಲ್ಲ ನೋಡಿ ನಿಜಕ್ಕೂ ಅತ್ಯಂತ ಖುಷಿಯಾಯಿತು. ಅಲ್ಲಿ ತೋಟದವರೆಗೂ ಟಾರ್ ರಸ್ತೆ, ಪ್ರತಿಯೊಂದು ಮನೆಯಲ್ಲೂ ಕಾರುಗಳು ಮತ್ತು ಸ್ವಚ್ಛತೆ. ನಮಗೂ ಅವರಿಗೂ ಒಂದು ವಿಷಯದಲ್ಲಿ ಸಾಮ್ಯ ಇದೆ– ಅದೇನೆಂದರೆ, ನಮ್ಮಲ್ಲಿ ಹೊಲದಲ್ಲಿ ಬೆದರುಗೊಂಬೆ ಇಡುವಂತೆ ಅವರ ತೋಟದಲ್ಲೂ 'ಬೆದರು ಗೂಬೆ'ಗಳಿರುತ್ತವೆ!

ನಾವು ಬ್ಲ್ಯಾಕ್ ಬೆರಿ ಮತ್ತು ಬ್ಲ್ಯೂ ಬೆರಿ ಹಣ್ಣುಗಳನ್ನು, ಅಗಾಗ್ಗೆ ರುಚಿ ನೋಡುತ್ತಾ ಕಿತ್ತುಕೊಂಡು ಅಲ್ಲೇ ತೂಕ ಮಾಡಿಸಿಕೊಂಡು ಬಂದೆವು. ಮನೆಗೆ ಬಂದ ಬಳಿಕ ಸ್ವಲ್ಪ ಹಣ್ಣನ್ನು ಹಾಗೇ ತಿಂದು, ಇನ್ನು ಸ್ವಲ್ಪವನ್ನು ಅವರ ರೆಸಿಪಿಯಿಂದ ಕಲಿತ 'ಪೈ' ಎಂಬ ಸಿಹಿ ಖಾದ್ಯವನ್ನು ಮಾಡಿ ತಿಂದೆವು. ಬಹಳ ರುಚಿಯಾಗಿತ್ತು. ●